* * * * * * * *

Procedure for a member to catch the Eye of the speaker

ಶ್ರೀ ಎಚ್. ಎನ್. ನಂಜೇಗೌಡ.—44ನೇ ರೂಲ್ ಸಬ್ ರೂಲ್ 2ರಲ್ಲಿ ಸಪ್ಲಿಮೆಂಟರಿ ಕೇಳುವುದಕ್ಕೆ ಸಭಾಸ್ಯರಿಗೆ ಎಲ್ಲರಿಗೂ ಹಕ್ಕು ಉಂಟು. ತಾವು ಆರ್ಡರ್ ಮಾಡುತ್ತಿರುವುದು ಆರ್ಡರಿನಲ್ಲಿ ಇಲ್ಲವೆಂಬುದು ನನ್ನ ಕ್ರಿಯಾರೀಪ ನನ್ನ ಒಂದು ಪ್ರಶ್ನೆ 107 ಹೇಳಿದಾಗ, ಅದಕ್ಕೆ ಒಂದು ನಿಮಿಷ ಕೂಡ ಪೂರ್ತಿಯಾಗಲಿಲ್ಲ, ಅದರ ಮೇರೆ ಚರ್ಚೆ ಬರುತ್ತದೆ, ಹೆಚ್ಚಿಗೆ ಉಪಪ್ರಶ್ನೆ ಬೇಡಿ ಎಂದು ಹೇಳಿದಿರಿ. ಆದರೆ ನಮ್ಮ ಮಿತ್ರರಾದ ಶ್ರೀ ವೆಂಕಟಗಿರಿಯಪ್ಪನವರ 370ನೆಯ ಪ್ರಶ್ನೆ ಬಂದಾಗ ಅದಕ್ಕೆ 5 ನಿಮಿಷದ ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಇದು ಪ್ರಾಮುಖ್ಯವಲ್ಲವೆಂದು ನೀವು ತಿಳಿದಿರೋ, ಅಥವಾ ನಾನೇ ಪ್ರಾಮುಖ್ಯವಲ್ಲವೆಂದು ತಿಳಿದಿರೋ ಎಂದು ಗೊತ್ತಾಗಲ್ಲ. ತಾವು ಇವತ್ತು ಈ ಸಭೆಗೆ ಬಂದಾಗ ಬಹಳ ನಗುಮುಖದಿಂದಲೇ ಬಂದಿರಿ. ಆಗಲೇ ನಾವು ಏನಂತಿ ಮಾಡಿಕೊಂಡೆವು, ಯಾವಾಗಲೂ ನಗುಮುಖದಲ್ಲೇ ಇರಬೇಕೆಂದು. ಸಪ್ಲಿಮೆಂಟರಿಗೆ ಅವಕಾಶ ಇಲ್ಲದ ಮೇರೆ ಅದನ್ನು ಆಕ್ಸ್ಪಾರ್ಡ್ ಎಂದು ಮಾಡಬಹುದಾಗಿತ್ತು. ಇನ್ನೊಂದು ಏನೆಂದರೆ ನಾನು ಕೈ ನನ್ನೆ ಮಾಡಿದರೂ ತಮ್ಮ ಗಮನ ಹರಿಯಲಲ್ಲ. ತಮ್ಮ ಗಮನ ಸೆಳೆಯಲು ಏನು ಮಾಡಬೇಕು, ನಾನು ಇಲ್ಲ ಚೀಟಿ ಸೀರೆ ಗುಟ್ಟುಕೊಂಡು ಬಂದು ತಮ್ಮ ಗಮನ ಸೆಳೆಯಬೇಕೇ.....

Smt. K. S. NAGARATHNAMMA.—I take objection, Sir. ಮಾನ್ಯ ಸದಸ್ಯರು ಚೀಟಿ ಸೀರೆ ಉಟ್ಟುಕೊಂಡು ಬರಬೇಕೇ ಎಂದು ಕೇಳಿದರು. ಅವರಿಗೆ ಚೀಟಿ ಸೀರೆ ಉಡಬೇಕೆಂದಿದ್ದರೆ, ನಾನು ಅದನ್ನು ಪ್ರೆಸೆಂಟ್ ಮಾಡುತ್ತೇನೆ. ನಾವು ಇಷ್ಟು ದಪ್ಪಗೆ ಇದ್ದೇವೆ, ಸೀರೆ ಉಟ್ಟುಕೊಂಡಿರುತ್ತೇವೆ, ಆದರೂ ಅವರ ಗಮನ ಸೆಳೆಯಲು ಕಷ್ಟವಾಗಿದೆ.

(*Laughter*)

Mr. SPEAKER.—I have already stated that during the short-time that is available it is not possible to call all Hon. Members. I have been telling that I allow one or two supplementaries to be put by the main questioner and I allow one supplementary each to a few other hon. Member. If every Hon. Member wants to put supplementaries on every question, it is impossible, and one has got to be selective. I have taken note of the points raised and I shall try to adjust to the desires of all hon. Members as far as possible regarding questions.

As regards the point raised as to how a member should catch the eye of the Speaker, the only way is to rise in the seat. If I have not called any member, it is not because I do not want to give him a chance but it is because I have to consider the claims of others also.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಈ ಸಭೆಯ ಕಾರ್ಯಕ್ರಮಗಳು ಹೇಗೆ ನಡೆಯಬೇಕು ಎನ್ನುವುದಕ್ಕೆ ಕೆಲವು ನೀತಿ ನಿಯಮಗಳನ್ನು ಹಾಕಿಕೊಂಡು ಅದರಂತೆ ನಾವು ಅವುಗಳನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ಪ್ರತಿಯೊಂದು ಸಂದರ್ಭಗಳಲ್ಲಿ ಈ ಸಭೆಯ ಕಾರ್ಯಕರಾಪಗಳನ್ನು ನಿರ್ವಹಿಸುವಾಗ ಅಧ್ಯಕ್ಷರ ಸ್ಥಾನಕ್ಕೆ ಸಾಕಷ್ಟು ಗೌರವ ಮಾನ ಮರ್ಯಾದೆ ಕೊಡತಕ್ಕದ್ದು ನಮ್ಮ ಆದ್ಯಕರ್ತವ್ಯ. ಆ ವಿಚಾರದಲ್ಲಿ ಯಾರೂ ಸಂಕುಚಿತ ಭಾವನೆಯನ್ನು ಇಟ್ಟುಕೊಂಡಿಲ್ಲ. ಆ ರೀತಿ ಮಾಡಿದರೆ ಈ ಸಭೆಯ ಗೌರವವನ್ನು ಕಾಪಾಡಿದಹಾಗೆ ಆಗುತ್ತದೆ. ಕೆಲವು ಸಂದರ್ಭಗಳಲ್ಲಿ ಏನಾಗುತ್ತದೆ ಎಂದರೆ ಅಧ್ಯಕ್ಷರು ಕೆಲವು ತೀರ್ಮಾನಗಳನ್ನು ಕೊಡುವಾಗ ಒಂದೊಂದು ಸಂದರ್ಭದಲ್ಲಿ ತಾವು ನಡೆದುಕೊಳ್ಳುವುದನ್ನು ನೋಡಿದರೆ ತಾವು ಏಕಪಕ್ಷೀಯವಾಗಿ ನಡೆದುಕೊಳ್ಳುತ್ತೀರೋ ಏನೋ ಎನ್ನುವ ಅನುಮಾನ ನಮ್ಮಲ್ಲಿ ಉಂಟಾಗಿದೆ. ಕೆಲವು ವೇಳೆ ತಾವು ಸರ್ಕಾರದ ಪಕ್ಷವನ್ನು ವಹಿಸಿ ಮಾತನಾಡುತ್ತೀರೋ ಏನೋ ಎನ್ನುವ ಭಾವನೆ ಉಂಟಾಗುತ್ತದೆ. ಇಂಥಾ ಕೆಲವಾರು

* * * Matter expunged as ordered by the Chair.

(ಶ್ರೀ ಎನ್. ಹುಚ್ಚಮಾಸ್ತಿ ಗೌಡ)

ನಂದರ್ಭಗಳು ನಮಗೆ ಒದಗಿದೆ. ಇದರಿಂದ ನಮಗೆ ಏನಾಗಿದೆ ಎಂದರೆ ತಮ್ಮ ನಡವಳಿಕೆಯನ್ನು ನಾವು ಪ್ರಶ್ನೆ ಮಾಡುವ ಹಾಗಿಲ್ಲ. ಅದನ್ನು ಪ್ರಶ್ನೆ ಮಾಡಿದರೆ ಅಧ್ಯಕ್ಷರ ಸ್ಥಾನಕ್ಕೆ ಗೌರವವನ್ನು ಕಡಿಮೆ ಮಾಡಿದಹಾಗಾಗುತ್ತದೆ. ಆದ್ದರಿಂದ ಈಗ ಏನಾಗಿದೆ ಎಂದರೆ ನೇರವಾಗಿ ಹೇಳುವುದಕ್ಕೆ ಬದಲಾಗಿ ವ್ಯಂಗ್ಯವಾಗಿ ಅಧ್ಯಕ್ಷರನ್ನು ಟೀಕೆ ಮಾಡುವ ಮಟ್ಟಕ್ಕೆ ಹೋಗಿದೆ. ಅದು ಆಗಬಾರದು ಎಂದು ನಾನು ಬಹಳ ವಿನಯದಿಂದ ಈ ಸಭೆಯಲ್ಲಿ ಹೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ತಾವು ಕೊಟ್ಟಂತಹ ತೀರ್ಮಾನವನ್ನು ನೇರವಾಗಿ ಪ್ರಶ್ನೆ ಮಾಡುವುದಕ್ಕೆ ಬದಲಾಗಿ ವ್ಯಂಗ್ಯವಾಗಿ ಹೇಳುವ ಮಟ್ಟಕ್ಕೆ ಬಂದಿದೆ. ಇಂಥಾ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ತಿಳಿಸಬೇಕು. ಮೊನ್ನೆ ಈ ಸಭೆ 11 ಗಂಟೆಗೆ ಸೇರಬೇಕು, 12 ಗಂಟೆಗೆ ಸೇರಬೇಕು ಎಂದು ಮಾನ್ಯ ಸದಸ್ಯರು ಹೇಳಿದಾಗ ಕೊನೆಗೆ 11 ಗಂಟೆಗೆ ಸೇರಬೇಕು ಎಂದು ತೀರ್ಮಾನವಾಯಿತು. ಅದರ ಬಗ್ಗೆ ತಾವು ಮಾನ್ಯ ಪಾರ್ಲಮೆಂಟರಿ ಶಾಖೆಯ ಮಂತ್ರಿಗಳ ಅಭಿಪ್ರಾಯವನ್ನು ಕೇಳಿದಾಗ ಮಾನ್ಯ ಸದಸ್ಯರು ಹೇಳಿದ್ದಾರೆ. ತಾವು ತೀರ್ಮಾನ ಕೊಟ್ಟಿದ್ದೀರಿ, ನನ್ನದು ಏನಿದೆ ಎಂದು ಮಾನ್ಯ ಪಾರ್ಲಮೆಂಟರಿ ಶಾಖೆಯ ಸಚಿವರು ಹೇಳಿದರು. ಹೀಗೆ ನೇರವಾಗಿ ತಮ್ಮ ತೀರ್ಮಾನವನ್ನು ಪ್ರಶ್ನೆ ಮಾಡುವುದಕ್ಕೆ ಬದಲಾಗಿ ವ್ಯಂಗ್ಯವಾಗಿ ಹೇಳುವ ಪರಿಸ್ಥಿತಿಗೆ ಹೋಗುತ್ತಿದೆ. ಆದ್ದರಿಂದ ಈ ಸಭೆಯ ಗೌರವ, ನಿಯಮಗಳ ಮುಖ್ಯ ಅಂಶಗಳ ಬಗ್ಗೆ ನಾನು ತಮ್ಮ ತೀರ್ಮಾನವನ್ನು ಪಡೆಯುವುದಕ್ಕೆ ಇಷ್ಟಪಡುತ್ತೇನೆ.

Mr. SPEAKER.—I may inform the Hon. Member that I took the observation of the Hon. Minister for Parliamentary Affairs as absolute acceptance of the decision. I always consider the observations made by the members in the best of light. Therefore, I accepted his statement as an unconditional acceptance of what I said.

Another point was raised that sometimes an impression is created that my decisions are one-sided. On the contrary, I have been taking pains to safeguard the rights and privileges of the opposition party and not the ruling party. For instance, the other day, the Ruling party were not in favour of allowing debate on resolution in respect of Cauvery basin but since a large number of members of this House were anxious to discuss the matter, I suspended the rules with the consent of this House and admitted the resolution. I hope the Hon. Members will understand the position of the Chair.

ಶ್ರೀ ಅಜೀಜ್ ಸೇಟ್.—ನನಗೆ ಸುಮಾರು 8 ವರ್ಷದ ಅನುಭವ ಈ ಅಸೆಂಬ್ಲಿಯ ಕಾರ್ಯಕಲಾಪಗಳ ಬಗ್ಗೆ ಇದೆ. ತಾವು ಒಂದು ಅಲಾರಾಮ್ ಟೈಂಪೀಸ್ ಇಟ್ಟುಕೊಂಡು ದಿನವೂ ತಾವು ಎಷ್ಟು ನಿಮಿಷ ಮಾತನಾಡುತ್ತೀರಿ ಎಂಬುದನ್ನು ನೋಡಿಕೊಳ್ಳಿ. ನಮಗೆ ಮೊದಲು ಶ್ರೀ ಬಾಳಿಗ ಇದ್ದರು. ಅವರಿಗೆ ಮುಂಚೆ ಶ್ರೀ ಕಾಂತಿ ಇದ್ದರು. ನಾನು ಸಕ ಅನೇಕ ಜನ ಸ್ಪೀಕರ್‌ಗಳನ್ನು ಚೇರ್‌ಮನ್‌ಗಳನ್ನು ನೋಡಿದ್ದೇನೆ.

Mr. SPEAKER.—It is not a point of order.

Sri AZEEZ SAIT.—Why not the Chair bear with me ?

Mr. SPEAKER.—The Hon. Member cannot dictate the Chair. The hon. Member will please resume his seat.

ಶ್ರೀ ಅಜೀಜ್ ಸೇಟ್.—ತಾವು ಆ ರೀತಿ ಹೇಳಬೇಡಿ. ತಾವು ಹೇಳುವ ರೀತಿಯಲ್ಲಿ ಹೇಳಬೇಕು.

Mr. SPEAKER.—Under rule 308 of the Rules of Procedure, I order the Hon. Member to withdraw from the House and he shall not partici-

pate in the debate in the House during the remainder of the day's sitting.

ಶ್ರೀ ವಾಟಾಳ್ ನಾಗರಾಜ್.—ಏನು ಸ್ವಾಮಿ, ತಾವು ಮಾತೆತ್ತಿದರೆ ಹೊರಗಡೆ ಹೊಗಿ ಎಂದು ಹೇಳುತ್ತೀರಿ.

Mr. SPEAKER.—The Hon. Member may please resume his seat.

ಶ್ರೀ ವಾಟಾಳ್ ನಾಗರಾಜ್.—ತಾವು ಆ ರೀತಿ ನಡೆದುಕೊಳ್ಳುವುದು ಒಳ್ಳೆಯದಲ್ಲ.

Mr. SPEAKER.—Under rule 308 of the Rules of Procedure I order the Hon. Member Sri Vatal Nagaraj also to withdraw from the House and he shall not participate in the debate in the House during the remainder of the day's sitting.

[Hon. Members Sriyuths Azeez Sait and Vatal Nagaraj withdrew from the House]

ಶ್ರೀ ಬಿ. ಪಿ. ಗಂಗಾಧರ್.—ಮಾನ್ಯ ಬಂಗಾರಪ್ಪನವರು ಅರಿಕೆ ಮಾಡಿದಂತೆ ನನಗೆ ಸರಕಾರದ ಉದ್ದೇಶ ಅರ್ಥವಾಗುತ್ತಿಲ್ಲ: ಅದಕ್ಕೋಸ್ಕರ ನಾನು ತಮ್ಮನ್ನು ಇಲ್ಲಿ ಕೇಳುತ್ತೇನೆ. ನಾನು ನುಮಾರು 10 ಪ್ರಶ್ನೆಗಳನ್ನು ಕಳಿಸಿದ್ದರೂ ಇದುವರೆಗೆ ಒಂದು ಪ್ರಶ್ನೆಗಾದರೂ ಸರಕಾರ ಉತ್ತರ ಕಳುಹಿಸಿಲ್ಲ. ನಮ್ಮ ತುಮಕೂರು ಟೌನು ಬಹಳ ವ್ಯಾಪಸ್ಯವಾದಮ್ಮ ಇಲ್ಲಿಗೆ ಮುಖ್ಯ ವಾಗಿ ಬೇಕಾಗಿರುವ ಅಂಡರಗ್ರೌಂಡು ಡ್ರೈನೇಜು ಹಾಗೂ ವಾಟರು ಸಪ್ಲೈ ವಿಚಾರದಲ್ಲಿ ಒಂದು ಪ್ರಶ್ನೆ ಕಳುಹಿಸಿದ್ದೆ. ಇಲ್ಲಿ ಕೆಲವು ದಾವಿಗಳನ್ನು ತೆಗೆಸಿದ್ದರು. ಇದನ್ನು ಸರಕಾರದ ಪರ್ಮಿಷನ್ ಇಲ್ಲದೆ ಮುಚ್ಚಿದ್ದಾರೆ. ಇದನ್ನು ಯಾರೂ ಕೇಳುತ್ತಿಲ್ಲ. ಹೀಗೆ ಅರ್ಜೆಂಟಾದ ಪ್ರಶ್ನೆಗಳನ್ನು ಕಳುಹಿಸಿದ್ದರೂ ಉತ್ತರ ಕೊಡದೆ ಇರುವುದಕ್ಕಾಗಿ ವಿಷಾದಪಡಬೇಕಾಗಿದೆ. ಇದಕ್ಕಾಗಿ ತಮ್ಮಲ್ಲಿ ನಾನು ಕೇಳುತ್ತಿರುವುದು.

Mr. SPEAKER.—I shall look into the matter.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—27 ಆಗಸ್ಟ್ 69ನೇ ಬುಧವಾರ ಕಡೂರು ತಾಲ್ಲೂಕು ಪಂಚನಹಳ್ಳಿ ಎಂಬ ಗ್ರಾಮದಲ್ಲಿ ಫ್ಯಾಮಿಲಿ ಪ್ಲಾನಿಂಗು ವಿಭಾಗದಲ್ಲಿ ಪಾರ್ವತಮ್ಮ ಎಂಬುವರಿಗೆ ಶಸ್ತ್ರ ಚಿಕಿತ್ಸೆಯಾಗಿತ್ತು. ಇವರು 1ನೇ ಸೆಪ್ಟೆಂಬರ್ 1969ರಂದು ಕಡೂರು ಜನರಲ್ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಇವರಿಗೆ ಬಹಳ ತೊಂದರೆಯಾಗಿದೆ ಎಂದು ನಾನು ಒಂದು ಪ್ರಶ್ನೆ ಕಳುಹಿಸಿದ್ದೆ. ಇದರ ಬಗ್ಗೆ ತಮ್ಮನ್ನು ಕೇಳುತ್ತಿದ್ದೇನೆ.

Mr. SPEAKER.—I shall look into the matter

Third Report of the Committee on Government Assurances

Presentation

Sri B. N. RAME GOWDA (Sira).—Sir, I beg to present. the Third Report of the Committee on Government Assurances.

Mr. SPEAKER.—Report is presented.